# ನೆನಪಿನ ದೋಣಿಯಲಿ...

**ಶಾಲಾ ದಿನಗಳಲ್ಲಿ ನಾಟಕದಲ್ಲಿ ಭಾಗವಹಿಸಿದ್ದು ಇಂದಿಗೂ ನೆನಪಿನಂಗಳದಲ್ಲಿ ಹಸಿರಾಗಿದೆ. ಇದಕ್ಕೆ ಇಂಬು ಕೊಡುವಂತೆ ಈಚೆಗೆ ಸಿಕ್ಕಿದ ಹಳೆಯ ಫೋಟೊ ನಾಟಕದ ನೆನಪುಗಳನ್ನು ಮತ್ತೆ ಮರುಕಳಿಸುವಂತೆ ಮಾಡಿತು.**

**■ ಜಯಲಕ್ಷ್ಮಿ ಜೆ. ದೇಶಪಾಂಡೆ, ಹಳಿಯಾಳ**



ಶಾಲಾ ಕಾಲೇಜುಗಳಲ್ಲಿ ಕಳೆದ ದಿನಗಳು ಎಷ್ಟು ವರ್ಷಗಳಾದರೂ ಮನದಲ್ಲಿ ಅಚ್ಚೊತ್ತಿ ನಿಂತಿರುತ್ತದೆ. ಇತ್ತೀಚೆಗೆ ಈ ಅತ್ಯಂತ ಹಳೆಯ ಫೋಟೋ ಸಿಕ್ಕಿದಾಗ, 46–47 ವರ್ಷಗಳ ಹಿಂದಿನ, ಹಳೆಯ ಸಿಹಿ ಸಿಹಿ ನೆನಪುಗಳ ಸರಮಾಲೆ ಒಂದರ ಹಿಂದೆ ಒಂದು ಮರುಕಳಿಸಿದ್ದು, ಮನಸ್ಸಿಗೆ ಮುದ ನೀಡಿದ್ದು ಸುಳ್ಳಲ್ಲ.

1970ರ ದಶಕ. ನನ್ನೂರು ಕುಂದಾಪುರ ಸಮೀಪದ (ತವರು ಮನೆ) ಬಸ್ರೂರು ಎಂಬ ಪುಟ್ಟ ಸುಂದರ ಹಳ್ಳಿ. ಪಿ.ಯು.ಸಿ. ಮುಗಿಸಿ ರಜೆಯಲ್ಲಿ ಧಾರವಾಡದ ಮಾವಶಿಯವರಲ್ಲಿ ಹೋದಾಗ, ಅವರ ಆಗ್ರಹದ ಮೇರೆಗೆ ಕರ್ನಾಟಕ ಕಾಲೇಜಿನಲ್ಲಿ ಆಗ ಬಿ.ಎ. ಮುಗಿಸಿದ ಹೆಮ್ಮೆ ನನ್ನದಾಗಿತ್ತು!

ಊರಿಗೆ ಬಂದಾಗ ನಮ್ಮೂರ 'ನಿವೇದಿತಾ ಗರ್ಲ್ಸ್ ಹಾಸ್ಟಲ್'ನಲ್ಲಿ ಶಿಕ್ಷಕಿಯೊಬ್ಬರ ಸ್ಥಾನ ಖಾಲಿ ಇದೆ ಎಂದು ದಿನಪತ್ರಿಕೆಯಲ್ಲಿ ಪ್ರಕಟಣೆ ಬಂದಾಗ ಇಂಟರ್ ವ್ಯೂಗಾಗಿ ಹಾಜರಾದೆ. ಚಿಕ್ಕಂದಿನಿಂದಲೂ ಅಧ್ಯಾಪಕಿಯಾಗುವ ಕನಸು ಕಟ್ಟಿದ್ದೆ! ಆಗಿನ್ನೂ ಬಿ.ಎಡ್. ಟಿಸಿಎಚ್ ಇತ್ಯಾದಿ ಡಿಗ್ರಿಗಳು ಶಿಕ್ಷಕಿಯರಿಗೆ ಕಡ್ಡಾಯವಾಗಿರಲಿಲ್ಲ. ಇತಿಹಾಸ ಐಚ್ಛಿಕ ವಿಷಯ ಪಡೆದುಕೊಂಡ ನನಗೆ ಹಲವಾರು ಅಭ್ಯರ್ಥಿಗಳ ನಡುವೆ Joining Letter ಸಿಕ್ಕಿದಾಗ ಆದ ಆನಂದ, ಸಂತೋಷ ಅಷ್ಟಿಷ್ಟಲ್ಲ.

ಆಗಿನ ಮುಖ್ಯೋಪಾಧ್ಯಾಯರಾಗಿದ್ದ ದಿ. ಶಿವರಾಮ ಶೆಟ್ಟಿ ಇವರದು ಆಕರ್ಷಕ ವ್ಯಕ್ತಿತ್ವ. ಅವರು ಪ್ರತಿವರ್ಷವೂ ಮಕ್ಕಳಿಂದಲೇ ಶಾಲಾ ವಾರ್ಷಿಕೋತ್ಸವದಲ್ಲಿ ನೃತ್ಯ, ನಾಟಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ನಾನು ಆ ಶಾಲೆಯಲ್ಲಿ ಇದ್ದ ವರ್ಷದಲ್ಲಿ ವಿದ್ಯಾರ್ಥಿನಿಯರು ಮತ್ತು ಶಿಕ್ಷಕಿಯರು ಸೇರಿ ಸ್ಕೂಲ್ ಡೇಗಾಗಿ 'ಭರತನ ಬಂಧು ಪ್ರೇಮ'ವೆಂಬ ನಾಟಕವನ್ನು ಮಾಡಿಸಿದ್ದರು.

ಇದರಲ್ಲಿ ದಶರಥ ಮಹಾರಾಜನ ಮುದ್ದಿನ ಮಡದಿಯಾಗಿ 'ಕೈಕೇಯಿ'ಯ ಪಾತ್ರವನ್ನು ನಾನು ಮಾಡಿದ್ದೆ. ಈ ಫೋಟೋದಲ್ಲಿ ನಿರಾಭರಣೆಯಾದ ಕೈಕೇಯಿಯು ಸಿಟ್ಟಿನಿಂದ ದಶರಥ ಮಹಾರಾಜನಿಗೆ, ತನಗೆ ಕೊಡಬೇಕಾಗಿದ್ದ ಎರಡು ವರಗಳನ್ನು ನೀಡಲು ಒತ್ತಾಯಿಸುತ್ತಿದ್ದಾಳೆ! ಅದು ಸಂಗೀತ ರೂಪದಲ್ಲೂ ಇತ್ತು. ವಯೊಲಿನ್, ತಬಲಾ, ಹಾರ್ಮೋನಿಯಂ ಸಾಥ್ ಕೂಡಾ ನಾಟಕದ ಹಾಡುಗಳಿಗೆ ಇರುತ್ತಿತ್ತು.

ಇಂದಿಗೂ ನನಗೆ ನೆನಪಾಗುತ್ತಿದೆ, ಆ ಪದ್ಯದ ಸಾಲುಗಳು...

'ನೀಡು ಭರತನಿಗೆ ರಾಜ್ಯಾ!
ರಾಜಾ, ನೀಡು ಭರತನಿಗೆ ರಾಜ್ಯ!
ಆ ರಾಮನು ತಾ ಸೇರಲು ಬೇಕೈ!
ವರ್ಷ ಹನ್ನೆರಡು ವನದೀ ರಾಜಾ!
ನೀಡು ಭರತನಿಗೆ ರಾಜ್ಯ! ರಾಜಾ!'

ಎಂದು ಎರಡೆರಡು ಬಾರಿ ಹೇಳುವಾಗ, ರಾಜನಿಗೆ ಆಘಾತವಾಗಿ ಅವನು ಬಿದ್ದಿದ್ದು, ಮುಗ್ಧ ಪ್ರೇಕ್ಷಕರೆಲ್ಲ ಮಮ್ಮಲ ಮರುಗಿ, ಕೈಕೇಯಿಗೆ ಶಾಪ ಹಾಕಿದ್ದು, ನನ್ನ ಸಹ ಅಧ್ಯಾಪಕಿಯರು ಆ ಬಗ್ಗೆ ನನಗೆ ಹೇಳಿದ್ದು ಎಲ್ಲವೂ ನೆನಪಾಯಿತು. ದಶರಥ ರಾಜನಾಗಿ ಆಗ ನನ್ನ ವಿದ್ಯಾರ್ಥಿನಿ 10ನೇ ತರಗತಿಯಲ್ಲಿ ಕಲಿಯುತ್ತಿರುವ ಶಶಿಕಲಾ, ಶ್ರೀರಾಮನಾಗಿ ಸರಸ್ವತಿ ಟೀಚರ್, ಮಂಥರೆಯಾಗಿ ಸುಮತಿ ಟೀಚರ್, ಭರತನಾಗಿ ಭಾನು ಟೀಚರ್, ವಶಿಷ್ಠ ಮುನಿಯಾಗಿ ವಿದ್ಯಾರ್ಥಿನಿ ಅನಸೂಯಾ ಹೀಗೆ ಇನ್ನೂ ಅನೇಕ ನೆನಪುಗಳು.

ಮೊನ್ನೆ ಶಿವಮೊಗ್ಗಕ್ಕೆ ಹೋಗಿದ್ದಾಗ ಶಿವಾಲಯದಲ್ಲಿ ಮಹಿಳೆಯೊಬ್ಬಳು ನನ್ನ ಹತ್ತಿರ ಬಂದು, ನೀವು ವನಿತಾ ಟೀಚರ್ ಅಲ್ವಾ (ಮದುವೆಗಿಂತ ಮೊದಲ ಹೆಸರು) ನಾನು ವಿಜಯಲಕ್ಷ್ಮಿ ಶೆಟ್ಟಿ, ನೀವು ಹೈಸ್ಕೂಲ್ ಟೀಚರ್ ಆಗಿದ್ದಾಗ ನಾನು 10ನೇ ತರಗತಿ ASPL ಆಗಿದ್ದೆ' ಎಂದು ತನ್ನ ನೆನಪನ್ನು ಹೇಳಿದರು.

ಬರೀ ಎರಡೇ ವರ್ಷ ಟೀಚರ್ ಆಗಿ, ನನ್ನ ಆಸೆಯನ್ನು ಪೂರೈಸಿ, 1974ರಲ್ಲಿ ಮದುವೆಯಾಗಿ ಹಳಿಯಾಳಕ್ಕೆ ಬಂದಿದ್ದು ಎಲ್ಲಾ ಸವಿ ಸವಿ ನೆನಪುಗಳು ಮನದಾಳದಲ್ಲಿ ಸಂತಸ ನೀಡಿದ್ದನ್ನು ನಾನು ಮರೆಯಲಾರೆ. ■